ಆದರೆ ಸುಮಿತ್ರ ಒಳಗಿನಿಂದ ಬಾಗಿಲು ಮುಚ್ಚಿದ್ದಳು. ಕೊನೆಗೆ ಕೊನೆಯವಳನ್ನು ಕಂಡು ತೃಪ್ತನಾಗಿದ್ದ.

ಆದರೆ ಆತನಿಗೆ ಅದಷ್ಟು ತೃಪ್ತಿಕೊಟ್ಟಿಲ್ಲವಂತೆ. ಈಗಲೂ ಸುಮಿಯಕ್ಕನೊಂದಿಗೆ ಏನೋ ಒಂದು 'ಇದು' ಇದೆಯೆಂದು ಊರ್ಮಿಳಾಗೆ ಅನುಮಾನವಿರಬೇಕೆನಿಸುತ್ತದೆ. ಬಹುಶಃ ಅದಕ್ಕೆ ಇರಬಹುದು ಗಂಡನನ್ನು ಬಲವಂತಪಡಿಸಿ 'ವೀಸಾ' ಪಡೆದು ಅಪರಿಚಿತ ಸಂಘದ ಜೊತೆಗೆ ಸೌದಿಗೆ ಹೋಗಿದ್ದು. ಇನ್ನು ಸದ್ಯಕ್ಕಂತು ಊರಿಗೆ ಹಿಂತಿರುಗುವ ಯೋಚನೆ ಇಲ್ಲವಂತೆ.

ಸತಿ ಆಗಾಗ ಬರುತ್ತಿರ್ತಾಳೆ. ತಿನ್ನಲು, ಉಡಲು ಇರುವುದನ್ನೆಲ್ಲಾ ಗಂಟು ಕಟ್ಟಿ ಜೀಪಿನಲ್ಲಿ ಬಂದಿಳಿಯುತ್ತಾಳೆ. ರುಚಿಯಾದ ಆಹಾರ ಅವಳ ಗಂಡನಿಗೆ ಇಷ್ಟವಂತೆ. ಮಾವ ಇದ್ದಾಗ ಹೇಗಾದರೂ ಮಾಡಿ ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ಸಂಗ್ರಹಿಸುತ್ತಿದ್ದರು. ಹೊಳೆಯಲ್ಲಿ ಮೀನು ಹಿಡಿಯುವವರನ್ನು ಭೇಟಿಯಾಗಿ ಮೀನು ತೆಗೆದುಕೊಳ್ಳುತ್ತಿದ್ದರು. ಮಾಂಸ, ಮೀನು, ಹಪ್ಪಳ, ಪಾಯಸವನ್ನೆಲ್ಲಾ ಮಾಡಿಸಿ ಎರಡು ಮೂರು ದಿನಗಳ ಕಾಲ ಸುಖಭೋಗವನ್ನು ಅನುಭವಿಸುತ್ತಿದ್ದರು. ಮಾವ ಹೋದ ನಂತರ ಅವನ ಆಗಮನ ಕಡಿಮೆಯಾಯಿತು. ಬೆಳಿಗ್ಗೆ ಬಂದರೆ ಎರಡು ಮೂರು ಗಂಟೆಗಳ ಕಾಲ ಇದ್ದು ಹಿಂತಿರುಗುತ್ತಾನೆ. ಊಟಕ್ಕೆ ಮೊದಲೇ ಊರು ತಲುಪಬೇಕೆಂದು ಹಠ ಮಾಡುತ್ತಾನೆ.

ಅವರೆಲ್ಲಾ ಹೋದ ನಂತರ ಮತ್ತೆ ಮೌನ. ಜೀರುಂಡೆಯ ಕರ್ಕಶ ಸದ್ದು. ಗುಳ್ಳೆನರಿಯ ಕೂಗು. ಬಾವಲಿಗಳು ಒಳಸೇರಿ ಹಾರಾಡುತ್ತವೆ. ದೂರದಿಂದ ಪಣಿಯರ ಕಾಲೋನಿಯಿಂದ ಹಾಡಿನ ಧ್ವನಿ ಕೆಲವೊಮ್ಮೆ ಕೇಳಿಸುತ್ತಿರುತ್ತದೆ.

ಮಾವ ಆಸ್ತಿಯನ್ನೆಲ್ಲಾ ಆರು ಪಾಲು ಮಾಡಿ ಪಾಲಿನ ದಸ್ತಾವೇಜನ್ನು ಬರೆದು ಕಣ್ಮುಚ್ಚಿದ್ದರು. ಅರ್ಧಭಾಗವನ್ನು ತಮ್ಮ ತಂಗಿಯ ಹೆಸರಿಗೆ ಬರೆದಿದ್ದರು. ವಿಷಯ ಗೊತ್ತಿದೆಯೋ ಏನೋ ಗೊತ್ತಿಲ್ಲ. ಅಮ್ಮ ಈಗಲೂ ಬಂದಿಲ್ಲ. ಉಳಿದ ಅರ್ಧವನ್ನು ಆರು ಪಾಲು ಮಾಡಿದ್ದರು. ಒಂದು ತಾಯಿಗೆ, ನಾಲ್ಕು ಪಾಲು ಮಕ್ಕಳಿಗೆ. ಒಂದು ಪಾಲು ನನಗೆ. ರತಿ ಮತ್ತು ಊರ್ಮಿಳಾಳ ಪಾಲುಗಳನ್ನು ಮಾರಲಾಗಿತ್ತು. ಹೊರಗೆ ಯಾರಿಗೋ ಕೊಡುವುದು ಬೇಡವೆಂದು ರತಿಯೇ ಅದನ್ನೆಲ್ಲಾ ಕೊಂಡಳು. ಅದರಿಂದ ಬರುವ ಆದಾಯವನ್ನೆಲ್ಲಾ ಸತಿ ಅಮ್ಮನಿಗೆ ಬಿಟ್ಟುಕೊಟ್ಟಿದ್ದಳು. ಅದನ್ನು ನೋಡಿಕೊಳ್ಳಲು ಯಾರೂ ಇಲ್ಲದ ಕಾರಣ ತೆಂಗಿನಕಾಯಿ, ಅಡಿಕೆ, ಗೇರುಬೀಜಗಳನ್ನೆಲ್ಲಾ ಗೇಣಿಗೆ ಕೊಟ್ಟಿದ್ದರು. ಗೇಣಿದಾರ ಕೊಡುವುದನ್ನು ತೆಗೆದುಕೊಳ್ಳುತ್ತಾರೆ, ಅಷ್ಟೇ. ಕೊಡದಿದ್ದರೆ ಕೇಳುವುದಕ್ಕೂ ಹೋಗಲಾರರು. ಅವರೇ ಕೆಲಸ ಮಾಡಿಸುತ್ತಾರೆ. ಖರ್ಚಿಗೆ ಅಷ್ಟು ಸಾಕು. ಉಳಿದಿದ್ದನ್ನು ಸೊಸೈಟಿಯ ಅಕೌಂಟಿಗೆ ಜಮೆ ಮಾಡುತ್ತಾರೆ.

ಹಾಗಾದರೆ ನನಗೆ ಇಲ್ಲೇ ಇರಬಹುದು. ನನಗೂ ಈ ಮಣ್ಣಿನ ಮೇಲೆ ಹಕ್ಕಿದೆ. ಪಾಪ ಮಾವ! ಗಡಸು ಧ್ವನಿಯವರಾದರೂ ಮೃದು ಹೃದಯಿ. ಹೃದಯದ ಆರರಲ್ಲೊಂದು ಪಾಲನ್ನು ನನಗಾಗಿ ಕತ್ತರಿಸಿಟ್ಟಿದ್ದಾರೆ.

'ನೀನು ಇಲ್ಲೇ ಇರಬೇಕೆಂಬುದು ಮಾವನವರ ಆಶೆಯಾಗಿತ್ತು. ಗಂಡು ದಿಕ್ಕಿಲ್ಲದ ಬೇಸರ ಮುಗಿಯಿತೂಂತ ಯಾವಾಗಲೂ ಹೇಳ್ತಿದ್ದರು. ಪಾಲು ಮಾಡುವಾಗ ರಸ್ತೆ ಬದಿಯ ನಲ್ವತ್ತು ಸೆಂಟು ನಿನಗೆ ಮೀಸಲಿಡಬೇಕೆಂದು ಹೇಳ್ತಾ ಇದ್ದರು. ಯಾವತ್ತಾದರೂ ಹಿಂತಿರುಗಿದರೆ ಒಂದು ಅಂಗಡಿಯನ್ನಾದರೂ ಇಡಬಹುದಲ್ಲಾ?'

'ಅದನ್ನು ಯಾರೂ ವಿರೋಧಿಸಲಿಲ್ವಾ?'

'ಯಾರು ವಿರೋಧಿಸಬೇಕಪ್ಪ? ನಿನ್ನ ಮೇಲೆ ಯಾರಿಗೆ ಕೋಪ ಇದೆ? ಚಾಕು, ಚೂರಿ ಬಡಿದಾಟಗಳಿಂದ ನೀನು ರಕ್ಷಿಸಲ್ಪಡಲು ಬೇರೆಲ್ಲೋ ಹೋಗಿದ್ದಲ್ವಾ? ಯಾವತ್ತಾದರೂ ನೀನು ಬಂದೇಬರ್ತೀಯಾಂತ ನಂಬಿಕೆ ಇಟ್ಟಿದ್ದರು. ಆದರೆ ನಿನ್ನನ್ನು ನೋಡುವ ಅದೃಷ್ಟ ಅವರಿಗಿಲ್ಲದೇ ಹೋಯಿತು' ಅತ್ತೆ ಕಣ್ಣೊರಸಿಕೊಂಡರು.

ಅತ್ತೆ ತೀರಿಹೋದರೆ ಏನು ಮಾಡಬೇಕೂಂತ ಅಪ್ಪ ಹೇಳಿದ್ದರು. ಅತ್ತೆಯ ಆಸ್ತಿಯನ್ನು ಐದು ಭಾಗ ಮಾಡಿ ನನಗೆ ಬರುವ ಒಂದು ಪಾಲನ್ನು ಕೂಡ ಸಮಿತ್ರಳಿಗೆ ಕೊಡಬೇಕು. ರಸ್ತೆ ಬದಿಯ ನಲ್ವತ್ತಾರು ಸೆಂಟಿನಲ್ಲಿ ಸುಮಿತ್ರಳಿಗೂ ಹಕ್ಕಿದೆಯಂತೆ.

ಸಾಯುವ ಮೊದಲೇ ಮಾವ ಎಲ್ಲವನ್ನು ಹೇಳಿ ಖಚಿತಪಡಿಸಿಕೊಂಡಿದ್ದರು. ಅವರು ಬದುಕಿರುವವರನ್ನು ಸಂರಕ್ಷಿಸುತ್ತಿದ್ದರು. ಆದರೆ ನನ್ನನ್ನು ಏಕೆ ಈ ಗುಂಪಿಗೆ ಸೇರಿಸಿದರೋ ಕಾಣೆ.

ರಾತ್ರಿ ಹೊತ್ತು ಮೀರುವವರೆಗೂ ಮಾತನಾಡುತ್ತಾ ಕುಳಿತ್ತಿದ್ದರೂ ಸುಮಿತ್ರ ಮಾತ್ರ ಬಾಯಿ ಬಿಡಲೇ ಇಲ್ಲ. ಸುಮಿತ್ರ ಏಕೆ ಮಾತನಾಡುತ್ತಿಲ್ಲವೆಂದು ಕೇಳಲು ನನಗೆ ಧೈರ್ಯವಾಗಲಿಲ್ಲ.

ಪೆಟ್ಟಿಗೆಯಿಂದ ಜರಿಮುಂಡು ತೆಗೆದು ಅತ್ತೆಗೆ ಕೊಟ್ಟೆ. ನನ್ನ ಕೈಯಿಂದ ಅವರು ಪಡೆದ ಕೂಡಲೇ ಬಿಕ್ಕಿ ಬಿಕ್ಕಿ ಅತ್ತು ಬಿಟ್ಟರು. ಅತ್ತೆಗೆ ಈ ತನಕ ಅಷ್ಟೊಂದು ದುಬಾರಿ ಬಟ್ಟೆಯನ್ನು ಯಾರೂ ತೆಗೆದುಕೊಟ್ಟೇ ಇಲ್ಲವೇನೋ ಅನ್ನಿಸಿತು. ನಾಗರಿಕತೆಯನ್ನು ಮೈಗೂಡಿಸಿಕೊಂಡಿರುವ ಸುಮಕ್ಕ ಓಣಂ ಹಬ್ಬ, ಕೇರಳ ರಾಜ್ಯೋತ್ಸವಕ್ಕೆ ಉಡಲಿರುವ ಬಟ್ಟೆಯಾಗಿತ್ತದು. ಬಣ್ಣಬಣ್ಣದ ನಾಲ್ಕು ಸೀರೆಗಳನ್ನು ಅತ್ತೆಗೇ ವಹಿಸಿದೆ. 'ಸುಮಿತ್ರಳಿಗೆ' ಎಂದಷ್ಟೇ ಹೇಳಿದೆ. ಸುಮಿತ್ರಳಿಗೆ ಅದ್ಯಾವುದೂ ಇಷ್ಟವಾಗದಿದ್ದರೆ ಅತ್ತೆ ಉಳಿದ ಮಕ್ಕಳಿಗೆ ಯಾರಿಗಾದರೂ ಕೊಡಲಿ.

ಹಗಲು ನಿದ್ರೆ ಮಾಡಿದ್ದರಿಂದಲ್ಲ ನನಗೆ ನಿದ್ರೆ ಬಾರದೇ ಇದ್ದಿದ್ದು. ಮಾವ ಮತ್ತು ಸುಮಿತ್ರರವರ ಹೃದಯ ವೈಶಾಲ್ಯತೆ! ಉಳಿದ ಹೆಣ್ಣು ಮಕ್ಕಳು ತೋರಿದ ಉದಾರತೆ! ಅತ್ತೆಯ ಮಾತೃ ವಾತ್ಸಲ್ಯ! ಇವರನ್ನೆಲ್ಲಾ ಇಲ್ಲಿ ಬಿಟ್ಟು ಹೊಸ ಜಗತ್ತಿನತ್ತ ಓಡಿ ಹೋಗಿದ್ದೆ. ಶ್ರೀದೇವಿಯ ರಕ್ಷಣಾ ವಲಯದಲ್ಲಿದ್ದಾಗ ಸುಮಿತ್ರಳನ್ನು ಜ್ಞಾಪಿಸಿಕೊಳ್ಳಲೇ ಇಲ್ಲ. ಅಂಕಲ್‌ನ ರಾಜಕೀಯ ಪೋಷಾಕಿನ ಬಿಸುಪಿನಲ್ಲಿ ನಿದ್ರಿಸುತ್ತಿದ್ದಾಗ ಮಾವನ ಹೃದಯ ಸ್ಪಂದನೆಗಳು ತಿಳಿಯಲೇ ಇಲ್ಲ. ಜೀವನದಲ್ಲಿ ಆ ತನಕ ತೋರದ ಒಂದು ತಪ್ಪಿತಸ್ಥ ಮನೋಭಾವ ನನ್ನ ಸುತ್ತಲೂ ತಿರುಗತೊಡಗಿತು. ಯಾವಾಗಲೋ ನಾವೊಮ್ಮೆ ಗಟ್ಟಿಯಾಗಿ ಅತ್ತುಬಿಟ್ಟೆ.

ಏನು ಹೇಳಿ, ನಾನು ಸುಮಿತ್ರಳತ್ತ ಮರಳಲಿ?

ಶ್ರೀದೇವಿ, ಅಂಕಲ್ ಮತ್ತು ಸುಮಕ್ಕ ಬೇರೊಂದು ಜನ್ಮದ ಸಂಬಂಧಿಕರೆಂದು ಕಲ್ಪಿಸಲು ಪ್ರಯತ್ನಿಸಿದೆ. ಶ್ರೀದೇವಿಗೆ ಮಗುವಾಗದೇ ಇದ್ದಿದ್ದು ಒಳ್ಳೆಯದೇ ಆಯಿತು. ಹೆಂಡತಿಯನ್ನು ವಿಚ್ಛೇದನ ಮಾಡಬಹುದು. ಆದರೆ ಮಕ್ಕಳನ್ನು? ಕೌಟುಂಬಿಕ ಸಂಬಂಧಗಳನ್ನು ಒಟ್ಟುಗೂಡಿಸಿ ಅನುಬಂಧಗೊಳಿಸುವ ಮಕ್ಕಳು! ಎಷ್ಟೋ ದಾಂಪತ್ಯ ಸಂಬಂಧಗಳು ಆ ದಾರದಲ್ಲೇ ಪೋಣಿತವಾಗಿದೆ.

ನನ್ನ ಗತಕಾಲದ ಕುರಿತು ಒಂದಲ್ಲ ಒಂದು ದಿನ ಅತ್ತೆ ಅಥವಾ ಸುಮಿತ್ರ ನನ್ನನ್ನು ಪ್ರಶ್ನಿಸಬಹುದು. ಆಗ ನಂಬುವಂತಹ ಕತೆಯೊಂದನ್ನು ಹೆಣೆದು ಹೇಳಬೇಕು. ಎಂತಹವರನ್ನೇ ನಂಬಿಸುವಂತಹ ಕತೆ ಹೇಳುವ ಕಲೆಗಾರಿಕೆ ನನಗೆ ಮೊದಲಿನಿಂದಲೂ ಗೊತ್ತಿದೆಯಲ್ಲ!

ಜೀವಕ್ಕೇ ಬೆದರಿಕೆ ಒಡ್ಡಿದಾಗ ಅಂದು ರಾತ್ರಿ ನಾನು ಹೇಳದೆ ಕೇಳದೆ ಪರಾರಿಯಾಗಿದ್ದೆ. ಅನಿರೀಕ್ಷಿತವಾಗಿ ಬಂದ ಜೀವ ಬೆದರಿಕೆ ನನ್ನ ಮನಸ್ಸಿನ ಸಮತೋಲನವನ್ನೇ ಏರುಪೇರು ಮಾಡಿತು. ಆಲಿಂಬ್ರದ ಕುರಿತು ಯೋಚಿಸಿದಾಗ ನಾನು ಬೆಚ್ಚಿ ನಡುಗುತ್ತೇನೆ. ಕೊನೆಗೆ ಪ್ರಜ್ಞಾಪೂರ್ವಕವಾಗಿಯೇ ಈ ಊರನ್ನು ಮರೆಯಲು ಪ್ರಯತ್ನಿಸಿದೆ. ಅಲೆದಲೆಯುತ್ತಾ ನಾನು ಹಿಮಾಲಯ ತಲುಪಿದೆ. ರೈಲಿನಲ್ಲಿ ಒಬ್ಬ ಸೂಫಿಯ ಪರಿಚಯವಾಯಿತು. ಅವನ ಒಬ್ಬ ಶಿಷ್ಯ ನನ್ನನ್ನು ಗಲ್ಫ್‌ಗೆ ಕೊಂಡೊಯ್ದ. ಗಲ್ಫ್‌ನಲ್ಲಿ ಪರವಾಗಿಲ್ಲವೆನ್ನುಂತಹದೊಂದು ಕೆಲಸ ಸಿಕ್ಕಿತು. ವಾಸಕ್ಕೆ ಮನೆ. ಹಾಗಿರಲು ಇದ್ದಕ್ಕಿದ್ದಂತೆ ಯುದ್ಧ ಬಂತು. ಪುನಃ ಆಲಿಂಬ್ರದ ನೆನಪಾಯಿತು. ಮಾವನ ವಾತ್ಸಲ್ಯ ಜ್ಞಾಪಕ ಬಂತು. ಸುಮಿತ್ರಳಿಗೆ ನಾನು ಮೋಸ ಮಾಡಿದೆನೆಂಬ ತಪ್ಪಿತಸ್ಥ ಮನೋಭಾವ ನನ್ನನ್ನು ಕಾಡಹತ್ತಿತ್ತು. ಮತ್ತೆ ತಡ ಮಾಡಲಿಲ್ಲ. ನೇರವಾಗಿ ವಿಮಾನ ಹತ್ತಿದೆ.

ಕತೆ ಪರವಾಗಿಲ್ಲವೆನಿಸಿತು. ಎಡಿಟ್ ಮಾಡಿ, ತಿದ್ದಿತೀಡಿ ಮತ್ತೆ ಮತ್ತೆ ಬರೆದು ಒಂದು ವಾರ ಮನೆಯೊಳಗೇ ಕಳೆದೆ. ಸುಮಿತ್ರ ಮಾತ್ರ ಮೌನ ವ್ರತದಲ್ಲೇ ಇದ್ದಳು. ಬೆಳ್ಳಂಬೆಳಿಗ್ಗೆ ಬಂದಿದ್ದರಿಂದಲೇ ಏನೋ, ಅತ್ತೆ ಹೊರಹೋಗದಿರುವುದರಿಂದಲೇ ಏನೋ ನನ್ನ ಆಗಮನ ಊರಿನಲ್ಲಿ ಯಾವುದೇ ಸಂಚಲನವನ್ನುಂಟು ಮಾಡಲಿಲ್ಲ. ಆದರೆ ನಾನಿಲ್ಲದ 12 ವರ್ಷ ಆಲಿಂಬ್ರದಲ್ಲಿ ಏನೇನು ನಡೆಯಿತೆಂಬುದನ್ನು ಅತ್ತೆ ಧಾರಾವಾಹಿಯಂತೆ ಈ ಒಂದು ವಾರದಲ್ಲಿ ನನಗೆ ಹೇಳಿದರು.

ಮಾವ ಮತ್ತು ಮಕ್ಕಳು ಕಲೆಕ್ಟರಮ್ಮ ಎಂದು ನಾಮಕರಣ ಮಾಡಿ ಕರೆದ ಜಿಲ್ಲಾಧಿಕಾರಿ, ಗೋಪಿನಾಥನೆಂಬ ನಾಯಕ. ಹುತಾತ್ಮರಾಗಬೇಕಾದ ಎರಡು ಗುಂಪಿನ ಹನ್ನೊಂದು ಮಂದಿ, ಫೆನಿ ಉತ್ಪಾದಿಸುವ ಫ್ಯಾಕ್ಟರಿಗಳೆಲ್ಲಾ ಕತೆಯಲ್ಲಿ ತುಂಬಿ ನಿಂತಿವು. ಇತ್ತೀಚೆಗಿನ ದಿನಗಳಲ್ಲಿ ಇಲ್ಲಿ ರಾಜಕೀಯ ಸಂಘರ್ಷಗಳು ನಡೆಯುತ್ತಲೇ ಇಲ್ಲ. ಬನ